**ದಿನಾಂಕಃ 22-06-2026 ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಸಿ.ವಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಅಪಘಾತದ ದಿನ ನಾನು ಸಂಜೆ **5** ಗಂಟೆಗೆ ತ್ರಿಗುಣ ಡಾಬಾದಿಂದ ಊಟಮಾಡಿಕೊಂಡು ನಾನು ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ ಎಂದು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ ಎಂದರೆ ಸರಿ. ತಿಪಟೂರಿನ ಐ.ಬಿ ಸರ್ಕಲ್ ನಿಂದ ನಮ್ಮ ಊರು ಅಂದಾಜು **8** ರಿಂದ **10** ಕಿ.ಮೀ ದೂರದಲ್ಲಿದೆ. ತಿಪಟೂರಿನ ಐ.ಬಿ ಸರ್ಕಲ್ ನಿಂದ ನಾನು ಕೆಲಸ ಮಾಡುವ ತಾಲ್ಲೂಕು ಪಂಚಾಯ್ತಿ ಕಛೇರಿ ಸುಮಾರು ಅರ್ಧ ಕಿ.ಮೀ ದೂರದಲ್ಲಿದೆ. ನಮ್ಮ ಊರಿಗೆ ಓಡಾಡುವ ಜನರು ಸಾಮಾನ್ಯವಾಗಿ ಐ.ಬಿ ಸರ್ಕಲ್ ನಿಂದ ತಿಪಟೂರು-ಹಾಲ್ಕುರಿಕೆ ಮಾರ್ಗವಾಗಿ ಹೋಗುತ್ತಾರೆ ಎನ್ನುವುದು ಸರಿ. ಸದರಿ ಮಾರ್ಗ ನಮ್ಮ ಊರದ ಹುರುಳಿಹಳ್ಳಿಗೆ ಇದೇ ಹತ್ತಿರದ ಮಾರ್ಗ ಎಂದರೆ ಸರಿ.

ಘಟನಾ ಸ್ಥಳವು ಐ.ಬಿ ಸರ್ಕಲ್ ನಿಂದ ಬಸ್ ನಿಲ್ದಾಣ, ಕೋಡಿ ಸರ್ಕಲ್ ಆದ ನಂತರ ಬರುತ್ತದೆ ಎಂದರೆ ಸರಿ. ಐ.ಬಿ ಸರ್ಕಲ್ ನಿಂದ ಸದರಿ ಸ್ಥಳವು ಸುಮಾರು **5** ರಿಂದ **6** ಕಿ.ಮೀ ದೂರದಲ್ಲಿದೆ ಎಂದರೆ ಸಾಕ್ಷಿಯು **4** ರಿಂದ **5** ಕಿ.ಮೀ ಇದೆ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಹಿಂಭಾಗದಲ್ಲಿ ಅಂದರೆ ತಿಪಟೂರು ಕಡೆಯ ಮಾರ್ಗದಲ್ಲಿ ತಿರುವು ಇದ್ದು ನಂತರ ಘಟನಾ ಸ್ಥಳದ ಮುಂಭಾಗದಲ್ಲಿ **3** ರಸ್ತೆ ಸೇರುವ ಕೂಡು ರಸ್ತೆ ಇದೆ ಎಂದರೆ ಸರಿ. ಕೂಡು ರಸ್ತೆಯ ಮುಂದೆ ಮತ್ತು ಹಿಂಭಾಗದಲ್ಲಿ ರಸ್ತೆ ಉಬ್ಬು ಇದೆ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ರಸ್ತೆಯ ಮಧ್ಯಭಾಗದಲ್ಲಿ ರಸ್ತೆ ವಿಭಜಕ ಇದೆ ಎಂದರೆ ಸರಿ. ರಸ್ತೆಯ ಎರಡೂ ಬದಿಯಲ್ಲಿ ಕಾರ್ ಶೋ ರೂಮ್, ಟ್ರಾಕ್ಟರ್ ಶೋ ರೂಮ್, ವಾಹನ ಬಿಡಿ ಭಾಗಗಳ ಅಂಗಡಿ ಇದೆ ಎಂದರೆ ಸರಿಯಲ್ಲ.

ಈ ಅಪಘಾತದ ಮೃತ ವಿನಯ್ ನನಗೆ ಚಿಕ್ಕ ವಯಸ್ಸಿನಿಂದಲೂ ಪರಿಚಯಸ್ಥ ಎನ್ನುವುದು ಸರಿಯಲ್ಲ. ಸದರಿ ವ್ಯಕ್ತಿಯನ್ನು ನಾನು ಅಪಘಾತವಾಗಿದ್ದ ದಿನ ಊರಿನಲ್ಲಿ ನೋಡಿದ್ದೆ. ಅವರು ನಮ್ಮ ಗ್ರಾಮದ ವಾಸಿ ಎನ್ನುವುದು ಸರಿ. ಚಾಸಾ-**2** ರಾಜಶೇಖರ್ ನನಗೆ ಪರಿಚಯಸ್ಥರಲ್ಲ. ಅದೇ ರೀತಿ ಚಾಸಾ-**3** ರಿಂದ **5** ರವರ ಪರಿಚಯ ನನಗೆ ಇರುವುದಿಲ್ಲ. ಚಾಸಾ-**6** ಮತ್ತು **7** ನಮ್ಮ ಊರಿನವರು. ಚಾಸಾ-**9** ಮತ್ತು **10** ರವರ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ಅಂದಾಜು **80** ಮನೆಗಳು ಇವೆ. ಸಾಮಾನ್ಯವಾಗಿ ಆ ಎಲ್ಲಾ ಮನೆಗಳವರ ಪರಿಚಯ ಇದೆ.

ನಾನು ಅಪಘಾತವಾಗುವಾಗ ಯಾವ ವಾಹನದಲ್ಲಿ ಹೋಗುತ್ತಿದ್ದೆ ಎಂದು ನಿಪಿ-**1**ರ ದೂರಿನಲ್ಲಿ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-**1** ರಲ್ಲಿ ನಾನು ರಸ್ತೆಯಲ್ಲಿ ಎಲ್ಲಿಂದ ಎಲ್ಲಿಗೆ ಹೋಗುತ್ತಿದ್ದೆ ಎಂದು ಕೂಡ ಬರೆದಿಲ್ಲ ಎಂದರೆ ಸರಿ. ನಿಪಿ-**1** ನ್ನು ಪೊಲೀಸ್ ಠಾಣೆಯಲ್ಲಿ ಟೈಪ್ ಮಾಡಿರುತ್ತಾರೆ ಯಾರು ಟೈಪ್ ಮಾಡಿದರು ನನಗೆ ಗೊತ್ತಿಲ್ಲ. ದೂರನ್ನು ಟೈಪ್ ಮಾಡಲು ಯಾರು ಮಾಹಿತಿ ನೀಡಿದರು ಎಂದು ನಿಪಿ-**1** ರಲ್ಲಿ ಬರೆದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆಯುತ್ತಾ ನಾನು ಮಾಹಿತಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಅಪಘಾತವಾದ ಸ್ಥಳ ರಸ್ತೆ ವಿಭಜಕದ ಎಡ ಅಥವಾ ಬಲ ಎಲ್ಲಿ ಎಂದು ಹೇಳಿಲ್ಲ ಎನ್ನುವುದು ಸರಿ. ನಿಪಿ-**1** ರ ದೂರಿನಲ್ಲಿ ಅಪಘಾತ ಪಡಿಸಿತ್ತು ಎಂದು ಹೇಳುವ ವಾಹನ ನನ್ನ ಹಿಂಭಾಗದಿಂದ ಹೋಯಿತೇ ಅಥವಾ ಮುಂಭಾಗದಿಂದ ಬಂತೇ ಎಂದು ನಿಖರವಾಗಿ ಹೇಳಿಲ್ಲ ಎನ್ನುವುದು ಸರಿಯಲ್ಲ. ನಾನು ಡಿಪ್ಲೊಮೋ ವ್ಯಾಸಂಗ ಮಾಡಿದ್ದೇನೆ. ಐ.ಬಿ ಸರ್ಕಲ್ ನಿಂದ ನಮ್ಮ ಊರಿಗೆ ಅಪಘಾತವಾಗಿರುವ ಮಾರ್ಗವನ್ನು ಉಪಯೋಗಿಸಿದ್ದಲ್ಲಿ ಅದು ಬಹಳ ದೂರದ ಪ್ರಯಾಣವಾಗುತ್ತದೆ ಎನ್ನುವುದು ಸರಿ. ಮೃತಪಟ್ಟ ವಿನಯ್ ನನ್ನ ಮುಂದಿನಿಂದ ಹೋಗುತ್ತಿದ್ದರು. ನನಗೂ ಅವರಿಗೂ ಸುಮಾರು **300** ಮೀಟರ್ ಅಂತರವಿತ್ತು. ಅಪಘಾತವು ಸುಮಾರು ನನ್ನಿಂದ **300** ಮೀಟರ್ ದೂರದಲ್ಲಿ ಆಗಿರುತ್ತದೆ. ನಾನು

ನಿಖರವಾಗಿ ಯಾವ ವಾಹನದಲ್ಲಿ ಹೋಗುತ್ತಿದ್ದೆ ಎಂದು ನಿಪಿ-1 ರಲ್ಲಿ ಬರೆದಿಲ್ಲ ಎಂದರೆ ಸರಿ. ಅಪಘಾತವಾದ ಸ್ಥಳಕ್ಕೆ ನಾನು ಸುಮಾರು 15 ಸೆಕೆಂಡ್ ನಲ್ಲಿ ತಲುಪಿದ್ದೇನೆ. ದೂರು ನೀಡಿದ ಸುಮಾರು 3 ದಿನಗಳ ನಂತರ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಅಪಘಾತವಾದ ನಂತರ ಸ್ಥಳಕ್ಕೆ ಚಾಸಾ-2 ರವರು ಬಂದಿದ್ದು ಗಾಯಗೊಂಡಿದ್ದ ವಿನಯ್ ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-2 ರವರು ಸ್ಥಳಕ್ಕೆ ಬರುವಾಗ ಅಲ್ಲಿ ಸುಮಾರು 10 ಜನ ಸೇರಿದ್ದರು. ಅಪಘಾತ ಆಯಿತು ಎಂದು ಹೇಳುವ ಸ್ಥಳ ರಸ್ತೆಯ ಯಾವ ಭಾಗದಲ್ಲಿ ಎಂದು ದೂರಿನಲ್ಲಿ ನಿಖರವಾಗಿ ನಮೂದಿಸಿಲ್ಲಎಂದರೆ ಸರಿ . ಅಪಘಾತ ಆದ ನಂತರ ಲೈಟ್ ಕಂಬ ರಸ್ತೆಯ ಮೇಲೆ ಬಿತ್ತು. ರಸ್ತೆಯ ಕಾಲು ಭಾಗಕ್ಕೆ ಲೈಟ್ ಕಂಬ ಬಿದ್ದಿರುತ್ತದೆ. ಲೈಟಿ ಕಂಬ ಸಿಮೆಂಟ್ ನ ಕಂಬವಾಗಿತ್ತು.

ನಾನು ಆರೋಪಿಯನ್ನು ಈ ಹಿಂದೆ ನೋಡಿಯೇ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅಪಘಾತದ ದಿನದಂದು ಯಾವುದೇ ಡಾಬಾಕ್ಕೂ ಹೋಗಿಲ್ಲ ಸಂಜೆ 5 ಗಂಟೆಗೆ ಡಾಬಾದಿಂದ ಹೊರಬಂದು ನನ್ನ ವಾಹನದಲ್ಲಿ ಹೋಗುತ್ತಲೂ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದಾಗ ಒಂದು ಕಾರು ವೇಗವಾಗಿ ಹೋಗುತ್ತ ನನ್ನ ಮುಂದೆ ಹೋಗುತ್ತಿದ್ದ ಮೃತ ವಿನಯ್ ನಿಗೆ ಢಿಕ್ಕಿ ಪಡಿಸಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ಹೆಸರು ಗೊತ್ತಿರಲಿಲ್ಲ. ಆರೋಪಿಯನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿದೆ ಎಂದರೆ ಸರಿಯಲ್ಲ. ಮೃತ ವಿನಯ್ ನ ಬಳಿ ಡಿ.ಎಲ್ ಇರಲಿಲ್ಲ ಮತ್ತು ವಾಹನದ ವಿಮೆ ಇಲ್ಲದಿದ್ದರೂ ಚಾಸಾ-6 ಮತ್ತು ಪೊಲೀಸರೊಂದಿಗೆ ಶೆರಿಕ್ ಆಗಿ ಮೃತ ವಿನಯನ ಕುಟುಂಬಕ್ಕೆ ಪರಿಹಾರ ದೊರಕಲಿ ಎಂಬ ದುರುದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಸಾರಾಂಶವನ್ನು ಪೊಲೀಸರು ನನಗೆ ಹೇಳಿದ್ದರು. ಸದರಿ ಸಮಯದಲ್ಲಿ 3-4 ಸಹಿಗಳನ್ನು ಪಡೆದಿದ್ದರು. ಸದರಿ ಸಮಯದಲ್ಲಿ ಖಾಲಿ ಹಾಳೆಗಳಿಗೆ ಎಷ್ಟು ಸಹಿ ಮಾಡಿದ್ದೀರಿ ಮತ್ತು ಬರವಣಿಗೆ ಆದ ಹಾಳೆಗಳಿಗೆ ಎಷ್ಟು ಸಹಿ ಮಾಡಿದ್ದೀರಿ ಎಂದರೆ

ನೆನಪಿಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಲ್ಲ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

(ವರದರಾಜ್ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.